Karnataka Legislative Assembly

Starred Question No. : 5690
Name of the Member : Sri Jayaprakash Hegde, K.
Date of Reply : 15-07-2005
Minister who replies : Chief Minister

<table>
<tr><th>Questions</th><th>Answer</th></tr>
<tr><td>A) When will the work for providing Civic Amenities such as Water Supply, Electricity, Under Ground Drainage and asphalting the roads commence in the Anjanapura andVisveshwaraiah Layouts, where sites have been distributed by BDA and in Further Extension of Visveshwariah Layout where alternative sites to be allotted (Furnish details) ;</td><td>Details of stages of providing Civic Amenities in the layouts where sites have been allotted by BDA are as follows :-
a) Anjanapura Township :-
<table>
<tr><td>1) Power Supply</td><td>Work Completed</td></tr>
<tr><td>2) Water Supply and Under Ground Drainage Works</td><td>The work undertaken by Bangalore Water Supply & Sewerage Board are executed. Connection is yet to be given.</td></tr>
<tr><td>3) Asphalting of Roads</td><td>The sanction is accorded for asphalting of main roads tenders are floated. Work will commence during August</td></tr>
<tr><td colspan="2">b) Sir M. Vishweswaraiah Layout :-</td></tr>
<tr><td>1) Power Supply</td><td>Tenders invited. Work will be started shortly.</td></tr>
<tr><td>2) Water Supply and Under Ground Drainage Works</td><td>Work estimate from Bangalore Water Supply & Sewerage Board is awaited.</td></tr>
<tr><td>3) Asphalting of Roads</td><td>Estimate for Asphalting of Main Roads in which Buses ply is sanctioned. Work will commence during August.</td></tr>
</table></td></tr>
</table>

<table>
<tr><th>Questions</th><th>Answer</th></tr>
<tr><td></td><td>
c) Further Extension of
Sir M. Vishweswaraiah Layout :-
<table>
<tr><td>1) Power Supply</td><td>Tenders are invited. Work will be taken up shortly.</td></tr>
<tr><td>2) Water Supply and Under Ground Drainage Works</td><td>Estimate from Bangalore Water Supply & Sewerage Board is awaited.</td></tr>
<tr><td>3) Asphalting of Roads</td><td>Estimate are under preparation. Work will be taken up in the current Financial Year</td></tr>
</table>
</td></tr>
</table>

ಶ್ರೀ ಮಲ್ಲಿಕಾರ್ಜುನ ಖರ್ಗೆ: ಉದ್ಘಾಟನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ.

ಶ್ರೀ ಗೋವಿಂದ ಎಂ ಕಾರಜೋಳ: ಆಯಿತು

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಸೈಟ್‌ಗಳನ್ನು ಅಲಾಟ್ ಮಾಡಿ ಬಹಳ ಸಮಯವನ್ನು ಕಳೆದರೂ ಸಹ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಅಲ್ಲಿ ಸೈಟ್‌ಗಳನ್ನು ಯಾರಿಗೆ ಅಲಾಟ್ ಮಾಡಿದ್ದಾರೆ ಅವರುಗಳು ಮನೆಯನ್ನು ಕಟ್ಟಿಕೊಳ್ಳುವಂತಹ ಪರಿಸ್ಥಿತಿ ಇಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು, ಸೈಟ್‌ಗಳನ್ನು ಅಲಾಟ್ ಮಾಡುವಾಗಲೇ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತಹ ವ್ಯವಸ್ಥೆಯನ್ನು ಮಾಡುವುದಕ್ಕಾಗುತ್ತದೆಯೇ? ಇಲ್ಲದೆ ಇದ್ದರೆ ಸೈಟ್‌ಗಳನ್ನು ಅಲಾಟ್ ಮಾಡಿ ವರ್ಷಗಟ್ಟಲೆ ಕಾಯುವಂತಹದ್ದು, ಕೆಲವು ಸಾರಿ ಸೈಟಿಗೋಸ್ಕರ ಕಾಯುವುದು, ಕೆಲವು ಸಾರಿ ಸೈಟ್‌ಗಳನ್ನು ಅಲಾಟ್ ಮಾಡಿಸಿಕೊಂಡು ಕಾಯುವುದು ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಯಾವಾಗ ವ್ಯವಸ್ಥೆಯಾಗುತ್ತದೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಉಪಾಧ್ಯಕ್ಷರೆ, ಕೆಲವು ಬಡಾವಣೆಗಳಲ್ಲಿ ಸರಿಯಾದ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಂತಹ ರೀತಿಯಲ್ಲಿ ಆಗಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಹೇಳಿದ್ದಾರೆ. ಅಂಜನಾಪುರದ ಬಡಾವಣೆಯ ಬಗ್ಗೆ ಹೇಳಿದ್ದಾರೆ, ಡಿಟೇಲ್ ಆಗಿ

ಉತ್ತರದಲ್ಲಿ ಹೇಳಿದ್ದೇನೆ. ಎಷ್ಟು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಮತ್ತೆ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿಯೂ ಅದರ ಬಗ್ಗೆ ಕೂಡ ಹೇಳಿದ್ದೇನೆ. ಎಲ್ಲಾ ಕಡೆ ಬೇರೆ ಬಡಾವಣೆಗಳು ಇವೆ ಎಲ್ಲಾ ಕಡೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕು. ನಿನೇ ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡತಕ್ಕಂತಹ ಕಾಲದಲ್ಲಿ ಆದೇಶವನ್ನು ಕೊಟ್ಟಿದೇನೆ. ಬೆಂಗಳೂರು ಡೆವಲಪಮೆಂಟ್ ಅಥಾರಿಟಿಯ ಕಡೆಯಿಂದ ಸೈಟ್ ಹಂಚಿಕೆ ಮಾಡುವುದು. ಲೇಔಟ್‌ಗಳನ್ನು ಮಾಡಿದ ಮೇಲೆ ವಾಟರ್‌ಸಪ್ಲೈ, ಎಲೆಕ್ಟ್ರಿಸಿಟಿ, ಡ್ರೈನೇಜ್, ಎಲ್ಲವನ್ನು ಒದಗಿಸಿ ಮಾಡಬೇಕೆಂದು ಹೇಳಿದ್ದೇನೆ. ತಾವು ಹೇಳತಕ್ಕಂತಹ ಮಾತಿನಲ್ಲಿ ಅರ್ಥವಿದೆ. ಬಹಳಷ್ಟು ಬಡಾವಣೆಗಳು ಹಾಗೆಯೇ ಇದೆ, ಆಂಜನಾಪುರ ಬಡಾವಣೆ (That is the biggest Layout in Bangalore City) ಅಲ್ಲಿ ಈಗ ಮೂಲಭೂತ ಸೌಕರ್ಯಗಳು ಪ್ರಾರಂಭವಾಗಿದೆ. ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಾರೆ, ಎಲ್ಲಾ ಬಡಾವಣೆಗಳಲ್ಲಿ ತಾವು ಎಲ್ಲೆಲ್ಲಿ ಕೇಳಿದ್ದೀರಿ ಅಕ್ಟೋಬರ್ ತಿಂಗಳಿನಲ್ಲಿ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಉಪಾಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದು ತಪ್ಪು ಮಾಹಿತಿ ಇರಬಹುದು, ನನ್ನದು ಒಂದೇ ಒಂದು ಕೊಶ್ಚನ್ ನಾಗರಬಾವಿ ಲೇಔಟ್ ಮಾಡಿ ಕಳೆದ 5 ವರ್ಷಗಳಾಗಿದೆ. ನೀಲಗಿರಿ ಬಂಬುಗಳಲ್ಲಿ ಇಡೀ ಲೇಔಟ್‌ಗೆ ಎಲೆಕ್ಟ್ರಿಸಿಟಿಯನ್ನು ತೆಗೆದುಕೊಂಡಿದ್ದಾರೆ. ನಾವು ದೂರ ಎಲ್ಲಿಯೋ ಹಳ್ಳಿಗೆ ಹೋಗಬೇಕಾಗಿಲ್ಲ ನಾನು ಬೆಂಗಳೂರು ಟೌನ್ ಬಗ್ಗೆ ಹೇಳುತ್ತಿದ್ದೇನೆ. ನಾಗರಬಾವಿ 3ನೇ ಹಂತದಲ್ಲಿ ಸುಮಾರು 500 ಮನೆಗಳು ಇವೆ. ನಾನು ಸ್ವತಃ ಅಲ್ಲಿಗೆ ಭೇಟಿ ಮಾಡಿದ್ದೇನೆ. ಅವರೆಲ್ಲರೂ ಹಗ್ಗವನ್ನು ಕಟ್ಟಿಕೊಂಡಿದ್ದಾರೆ. ಏನಾದರೂ ಹೆಚ್ಚು ಕಡಿಮೆಯಾದರೆ ಅಲ್ಲಿ ಸುಮಾರು 100 ಜನರು ಸಾಯುತ್ತಾರೆ. ಅಲ್ಲಿ ಆ ಪರಿಸ್ಥಿತಿ ಇದೆ. ನಾವು ಸರ್ಟಿಫಿಕೇಟನ್ನು ಕೊಡುವುದಕ್ಕೆ ಮುಂಚೆ ಕ್ರಯ ಆಗುವುದಕ್ಕೆ ಮುಂಚೆ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಇದು ಒಂದು ಬಡಾವಣೆಯಲ್ಲ, ಕೆಂಗೇರಿಯ ಹತ್ತಿರ ಮತ್ತೊಂದು ಬಡಾವಣೆಯೂ ಕೂಡ ಅದೇ ಪರಿಸ್ಥಿತಿಯಲ್ಲಿದೆ. ಅಲ್ಲಿ ಇದುವರೆವಿಗೂ ನಾಗರೀಕ ಸೌಲಭ್ಯಗಳು ಇಲ್ಲ. ಕುಡಿಯುವ ನೀರು ಇಲ್ಲ, ರಸ್ತೆ ಇಲ್ಲ, ಚರಂಡಿಯ ವ್ಯವಸ್ಥೆ ಕೂಡ ಇಲ್ಲ. ಮೊನ್ನೆ ದಿವಸ ಹೆಬ್ಬಾವು ಬಂದು ಸೇರಿಕೊಂಡು ಮನೆಯನ್ನು ಖಾಲಿ ಮಾಡಿ ಹೋದವರು ಇನ್ನು 6 ತಿಂಗಳಾದರೂ ಆ ಮನೆಯ ಒಳಗಡೆ ಬಂದಿರುವುದಿಲ್ಲ. ಈ ಪರಿಸ್ಥಿತಿ ಆ ಬಿಡಿಎ ಬಡಾವಣೆಗಳಲ್ಲಿ ಇದೆ. ನಾನು ತಮ್ಮಲ್ಲಿ ಆಗ್ರಹ ಮಾಡುವುದೇನೆಂದರೆ, ದಯವಿಟ್ಟು ಇನ್ನು ಮುಂದೆ ಅವರಿಗೆ ಅವರು ಮನೆಯನ್ನು ಕಟ್ಟುವುದಕ್ಕೆ ಮುಂಚೆ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಎಲೆಕ್ಟ್ರಿಸಿಟಿ ರಸ್ತೆ ಇವುಗಳನ್ನು ಕೊಟ್ಟು ಮಾಡಬೇಕು. ನೀವು ಅವರಿಂದ

ಮೊದಲೆ ಹಣವನ್ನು ಪಡೆದುಕೊಂಡಿರುತ್ತೀರಿ. ಪೂರ್ತಿ ಹಣವನ್ನು ಅವೆರಿಂದ ಪಡೆದುಕೊಂಡು ನೀವು ಅವರಿಗೆ ನಾಗರೀಕ ಸೌಲಭ್ಯಗಳನ್ನು ಕೊಡದಿದ್ದರೆ, ನೀವು ಅವರಿಗೆ ಮೋಸ ಮಾಡಿದ ಹಾಗೆ ಆಗುತ್ತದೆ. ಯಾರು ಕ್ರಯಪತ್ರವನ್ನು ತೆಗೆದು ಕೊಂಡಿರುತ್ತಾರೆ, ಅವರಿಗೆ ಮೋಸ ಮಾಡಿದ ಹಾಗೆ ಆಗುತ್ತದೆ. ಅದಕ್ಕಾಗಿ ನಾನು ಸರ್ಕಾರವನ್ನು ತಮ್ಮ ಮೂಲಕ ಆಗ್ರಹ ಮಾಡುತ್ತಿದ್ದೇನೆ. ದಯವಿಟ್ಟು ಇನ್ನು ಮುಂದೆ ಆ ರೀತಿಯಾಗಿ ಅನಾಹುತಗಳು ಆಗುವುದು ಬೇಡ. ಏನಾದರೂ ದೊಡ್ಡ ಅನಾಹುತವಾಗುವುದಕ್ಕೆ ಮುಂಚೆ ಅದನ್ನು ಸರಿಪಡಿಸಬೇಕೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಈಗ ಮಾನ್ಯ ಸದಸ್ಯರಾದ ಶ್ರೀ ಅಶೋಕ್‌ರವರು ಕೇಳಿದ್ದಾರೆ. ಅದನ್ನು ನಾನು ಅಲ್ಲಗಳೆಯುತ್ತಿದ್ದೇನೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದೇನೆಂದರೆ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ, ಹೌಸಿಂಗ್ ಬೋರ್ಡ್, ಸ್ಲಂ ಬೋರ್ಡ್, ಮೆಟ್ರೊ ಪಾಲಿಟಿನ್ ಅಥಾರಿಟಿ ಬಾಂಬೆ–ಹೈದರಾಬಾದ್ ನಲ್ಲಿದ್ದರೆ There must be perfect understanding ಇವತ್ತು ಬಿಡಿಎರವರು ಮಾಡತಕ್ಕಂತಹ ಬಡಾವಣೆಗೆ ನೀರು ಕೊಡತಕ್ಕಂತಹ ಶಕ್ತಿ, ಬೆಂಗಳೂರು ವಾಟರ್‌ಸಪ್ಲೈ ಬೋರ್ಡ್ ಇದೆಯೋ ಅಥವಾ ಇಲ್ಲವೋ, ಎಲೆಕ್ಟ್ರಿಸಿಟಿ ಪರಸ್ಪರ ಸಮಾಲೋಚನೆ ಮಾಡಿದರೆ ಸರಿಯಾಗುತ್ತದೆ. ಈಗ ಮೊದಲಿನ ಬೆಂಗಳೂರು ಉಳಿದಿಲ್ಲ, ಇಲ್ಲಿ ಜನಸಂಖ್ಯೆಯು ಬೆಳೆಯುತ್ತಿದೆ ಇದು ಮೆಟ್ರೋಪಾಲಿಟಿನ್ ಅಥಾರಿಟಿ ಆದರೆ ಪರಸ್ಪರ ಹೊಂದಾಣಿಕೆ ಇದ್ದರೆ ತಾವು ಹೇಳುವುದರಲ್ಲಿ ಅರ್ಥವಿದೆ. ಬಡಾವಣೆಯನ್ನು ಮಾಡುತ್ತೇವೆ, ಸೈಟನ್ನು ಕೊಡುತ್ತೇವೆ, ಮತ್ತೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡದಿದ್ದರೆ ಅವರೆಲ್ಲರೂ ಪರದಾಟವನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ತಾವು ಹೇಳುವುದು ಮುಖ್ಯವಾಗಿ ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಏನು ಹೇಳಿದ್ದಾರೆ, ತಾವು ಏನು ಹೇಳುತ್ತಿದ್ದೀರಿ, ಅದರ ಬಗ್ಗೆ ಆದೇಶವನ್ನು ಕೊಟ್ಟು ಸರಿಪಡಿಸತಕ್ಕಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ಜಯಪ್ರಕಾಶ್ ಹೆಗ್ಡೆ: ಈ ಬಿಲ್ಡಿಂಗ್ ಬೈಲಾ ಪ್ರಕಾರ ಸೆಟ್‌ಬ್ಯಾಕನ್ನು ಬಿಡದೆ ಕಟ್ಟುತ್ತಿದ್ದಾರೆ. ಅದರ ಬಗ್ಗೆ ಸ್ವಲ್ಪ ಸ್ಟ್ರಿಟ್ ಆಗಿ ಅಧಿಕಾರಿಗಳು ವಾಚ್ ಮಾಡಬೇಕು. ಸೆಟ್‌ಬಾಕ್ಸ್ ಬಿಡದೆ ಒಂದಕ್ಕೆ ಒಂದು ಬಿಲ್ಡಿಂಗ್‌ನ್ನು ಸೇರಿಸಿಕೊಂಡು ಕಟ್ಟುವಂತಹ ಪರಿಸ್ಥಿತಿಯಾಗಿದೆ. ಇದು ಎಲ್ಲಾ ಕಡೆಗಳಲ್ಲೂ ಕೂಡ ಆಗುತ್ತಿದೆ. ಅದನ್ನು ಕೂಡ ಸ್ವಲ್ಪ ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಬಿಡಿಎನಲ್ಲಿ ಅಲ್ಟರ್‌ನೇಟಿವ್ ಸೈಟ್ ಎಷ್ಟು ಕೊಟ್ಟಿದ್ದಾರೆ ಏತಕ್ಕಾಗಿ ಕೊಟ್ಟಿದ್ದಾರೆ ಎಂಬುದರ ಬಗ್ಗೆ ತಾವು ಒಂದು ಸಾರಿ ಅದನ್ನು ತರಿಸಿಕೊಂಡು

ನೋಡಬೇಕು. ಕೊಟ್ಟಿರುವಂತಹ ಕಡೆಗಳಲ್ಲಿ ಸೈಟ್‌ಗಳು ಇರುವುದಿಲ್ಲ. ಆಲ್ಟರ್ ನೇಟಿವ್ ಸೈಟ್ ಕೊಡುವಂತಹ ಸಿಸ್ಟಮ್ ಏತಕ್ಕಾಗಿ ಬಂತು? ಎಂದು ಗೊತ್ತಾಗಬೇಕು. ಯಾವುದೋ ಕೋರ್ಟ್ ಡಿಸ್‌ಪ್ಯೂಟ್ ಆಗಿ ಮತ್ತೊಂದು ಆಗಿ ಆಲ್ಟರ್‌ನೇಟಿವ್ ಆಗಿ ಸೈಟ್ ಕೊಡುವುದು ಬೇರೆ. ಸೈಟ್ ಇಲ್ಲದೆ ಇರುವ ಕಡೆಗಳಲ್ಲಿಯೇ ರಿಜಿಸ್ಟ್ರೇಷನ್ ಆಗಿರುತ್ತದೆ. ಖಾತೆ ಹಾಗೂ ಎಲ್ಲವೂ ಕೂಡ ಆಗಿರುತ್ತವೆ. ಆಮೇಲೆ ಆಲ್ಟರ್ ನೇಟಿವ್ ಸೈಟನ್ನು ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ಈಗಾಗಲೇ ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ಬಿಡಿಎದವರು ಎಂಎಲ್‌ಎ ಹಾಗೂ ಎಂಎಲ್‌ಸಿಗಳಿಗೆ ಮತ್ತು ಪ್ರಭಾವಿ ವ್ಯಕ್ತಿಗಳಿಗೆ ಸೈಟ್‌ಗಳನ್ನು ಕೊಟ್ಟಿದ್ದಾರೆ. ಅಲ್ಲಿ ಲ್ಯಾಂಡ್ ಡಿಸ್‌ಪ್ಯೂಟ್ ಆಗಿದೆ, ಈಗ ಎಂಎಲ್‌ಎಗಳಿಗೆ ಸೈಟ್ ಇಲ್ಲ, ಪ್ರಭಾವಿ ವ್ಯಕ್ತಿಗಳಿಗೂ ಕೂಡ ಸೈಟ್ ಇಲ್ಲ, ತಾವು ಕೊಟ್ಟಿರುವಂತಹ ಜಾಗವೇ ಇಲ್ಲ. ಕೋರ್ಟಿನಲ್ಲಿ ಕೇಸ್ ಆಗಿದೆ. ತಾವು ಏನಾದರೂ ಪರಿಶೀಲನೆ ಮಾಡಿ ಅವರನ್ನು ಕರೆದು ಅವರ ಜೊತೆಗೆ ಸಂಧಾನ ಮಾಡಿ ಸೂಕ್ತವಾದಂತಹ ಪರಿಹಾರವನ್ನಾದರೂ ಕೊಡಬೇಕು. ಇನ್ನು ಎಷ್ಟು ವರ್ಷಗಳ ಕಾಲ ಹೆಣಗುವುದು. ಅದು ಮುಕ್ತವಾಗಿ ಅವರಿಗೆ ಸೈಟ್ ಸಿಗುವುದಿಲ್ಲ. ಎಂಎಲ್‌ಎ ಹಾಗು ಎಂಎಲ್‌ಸಿಗಳಿಗೆ ಸೈಟನ್ನು ಕೊಟ್ಟಿದ್ದೀರಿ, ಅಲ್ಲಿ ಸೈಟ್ ಇರುವುದಿಲ್ಲ, ಇದರ ಬಗ್ಗೆ ಕೋರ್ಟಿನಲ್ಲಿ ಕೇಸ್ ಆಗಿದೆ, ಅಲ್ಲಿ ಒಂದು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅಲ್ಲಿ ಸ್ಟೇ ಆಗಿದೆ, ಅದು 25 ವರ್ಷಗಳಾದರೂ ಕೂಡ ಅದು ಇನ್ನು ಬಗೆಹರಿಸುವುದಿಲ್ಲ. ಅದಕ್ಕೋಸ್ಕರ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಲ್ಯಾಂಡ್‌ಲಾರ್ಡ್‌ರವರನ್ನು ಕರೆದು ಸಂಧಾನ ಮಾಡಿ ಏನಾದರೂ ಮಾಡಿ ಬಗೆಹರಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಸುಬ್ರಮಣ್ಯರವರಿಗೆ ಬಹಳ ಚೆನ್ನಾಗಿ ಗೊತ್ತಿದೆ, ನಾವು ಏನು ಸೈಟ್ ಕೊಟ್ಟಿದ್ದೇವೆ, ಅದರಲ್ಲಿ ಯಾವುದೇ ಡಿಸ್‌ಪ್ಯೂಟೆಡ್ ಏರಿಯಾದಲ್ಲಿ ಕೊಟ್ಟಿಲ್ಲ. ನಾನು ಬಂದ ಮೇಲೆ ಎಷ್ಟು ಸೈಟುಗಳನ್ನು ಕೊಟ್ಟಿದ್ದೇನೆ. ಅಲ್ಲಿ ಎಲ್ಲರೂ ಕೂಡ ಪ್ರಾರಂಭ ಮಾಡಿದ್ದಾರೆ. ಎಲ್ಲಿಯೂ ಕೂಡ ಡಿಸ್‌ಪ್ಯೂಟ್ ಇಲ್ಲ. ಮುಂದೆ ಹೇಳಬೇಕಾದ ವಿಷಯಗಳೇನಿದೆ, ಅದರ ಬಗ್ಗೆ ಸರಿಯಾಗಿ ಗಮನಕೊಟ್ಟು